ಅಧ್ಯಕ್ಷರು : ಯಾವ ಉತ್ತರ ಬಂದಿಲ್ಲ?

ಶ್ರೀ ಶಿವಾನಂದ ಎಚ್. ಕೌಜಲಗಿ : 24ನೇ ತಾರೀಖು 25ನೇ ತಾರೀಖು ಮತ್ತು ಇವತ್ತಿನ ಪ್ರಶ್ನೆಗಳಿಗೆ ಉತ್ತರಗಳೇ ಬಂದಿಲ್ಲ. ಒಂದು ಪ್ರಶ್ನೆಗೂ ಉತ್ತರ ಬರದಿದ್ದರೆ ಏನು ಮಾಡಬೇಕು? ಉತ್ತರ ಕೊಡದಿದ್ದರೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳನ್ನು ಸಭೆಯ ಮುಂದೆ ಇಡುವುದನ್ನು ಬಂದ್ ಮಾಡಿ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರ ನೀಡುವ 79 ಪ್ರಶ್ನೆಗಳು ಇವೆ. ಅದರಲ್ಲಿ 70 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇನ್ನು 9 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಬಂದ ಮೇಲೆ ತಮಗೆ ಸರ್ಕ್ಯುಲೇಟ್ ಮಾಡುತ್ತಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ : ನಿನ್ನೆಯ ಪ್ರಶ್ನೆಗಳಿಗೂ ಉತ್ತರಗಳು ಬಂದಿಲ್ಲ. ಇವತ್ತೂ ಬಂದಿಲ್ಲ

ಅಧ್ಯಕ್ಷರು : ವಿಚಾರಿಸಿ ನಾನು ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೆಲವು ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಸ್ವಾಮಿ.

ಶ್ರೀ ಶಿವಾನಂದ ಎಚ್. ಕೌಜಲಗಿ : ನಮಗೆ ಬಂದಿಲ್ಲ ನಾವು ಹೇಳುತ್ತೇನೆ. ನೀವು ಏನು ಫಾರ್ ಗೌರ್ನಮೆಂಟ್?

ಶ್ರೀ ವಾಟಾಳ್ ನಾಗರಾಜ್ : ಉತ್ತರ ಬಂದಿದೆ ಎಂದು ಹೇಳಿದರೆ ನಾವು ಫಾರ್ ಗೌರ್ನಮೆಂಟ್ ಎಂದು ತಿಳಿಯುವುದೇ ನಾವು ಇಂಥಾದ್ದಕ್ಕೆ ಏನು ಮಾಡುವುದು?

ಅಧ್ಯಕ್ಷರು : ಉತ್ತರ ಬಂದಿದೆ ಎಂದು ಅವರು ನನಗೆ ಹೇಳಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

1. ಡಿ.ಪಿ.ಎ.ಆರ್. ಕಾರ್ಯದರ್ಶಿಗಳನ್ನು ಒಳಗೊಂಡಂತೆ 5ಜನ ಕಾರ್ಯದರ್ಶಿಗಳ ಟೆಲಿಫೋನ್ ಡಿಸ್‌ಕನೆಕ್ಷನ್.

+ ಡಾ. ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ ಫೈನಾನ್‌ಷ್ಯಲ್ ಮ್ಯಾನೇಜ್‌ಮೆಂಟ್ ಬಗ್ಗೆ I have one valid point most crucial point.

ಸರ್ಕಾರ ದಿವಾಳಿಯಾಗಿದೆ. ಇವತ್ತು ಡಿ.ಪಿ.ಎ.ಆರ್. ಸೆಕ್ರೆಟರಿ ಟೆಲಿಫೋನ್ ಒಳಗೊಂಡಂತೆ 5 ಜನ ಸೆಕ್ರೆಟರಿಗಳ ಟೆಲಿಫೋನ್‌ಅನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ. ನಾನು ಒಂದೇ ಒಂದು ಪ್ರಶ್ನೆ ಕೇಳುವುದು ಸೆಕ್ರೆಟರಿಗಳ ಟೆಲಿಫೋನ್ ಡಿಸ್‌ಕನೆಕ್ಟ್ ಮಾಡಿರುವುದು ಹೌದೋ ಅಲ್ಲವೋ ಅಷ್ಟು ಹೇಳಿದರೆ ಸಾಕು.

D.P.A.R is a most crucial department. Telephone has been disconnected for non-payment of bills.

5 ಲಕ್ಷ ರೂಪಾಯಿ ಹಣ ಕೊಡದೆ ಇರತಕ್ಕಂಥ ಪರಿಸ್ಥಿತಿಯಿಂದ ಈ ರೀತಿ ಆಗಿದೆ.